# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1031

ಉತ್ತರಿಸಬೇಕಾದ ದಿನಾಂಕ : 10.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

| ಕ್ರಸಂ | | ಉತ್ತರಗಳು |
|---|---|---|
| ಅ | ಗೋ ಹತ್ಯೆ ನಿಷೇಧ ಕಾಯಿದೆಯನ್ನು ಜಾರಿಗೆ ತರುವುದರಿಂದ ರೈತರಿಗೆ ಉಂಟಾಗಬಹುದಾದ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು: | ಗೋ ಹತ್ಯೆ ನಿಷೇಧ ಕಾಯಿದೆಯನ್ನು ಜಾರಿಗೆ ತರುವುದರಿಂದ ರೈತರಿಗೆ ಉಂಟಾಗಬಹುದಾದ ಸಮಸ್ಯೆಗಳನ್ನು ಪರಿಹರಿಸಲು ವಯಸ್ಸಾದ, ನಿರುಪಯುಕ್ತ, ಅನಾರೋಗ್ಯಪೀಡಿತ ಜಾನುವಾರುಗಳನ್ನು ಹತ್ತಿರದ ಖಾಸಗಿ ಗೋಶಾಲೆಗಳಲ್ಲಿ ಬಿಡಬಹುದಾಗಿದೆ ಮತ್ತು ಸರ್ಕಾರದಿಂದ ಈ ಗೋಶಾಲೆಗಳಿಗೆ ಅನುದಾನ ನೀಡಲಾಗುತ್ತದೆ. |
| ಆ | ವಯಸ್ಸಾದ ಮತ್ತು ಹೊಲದಲ್ಲಿ ಉಳುಮೆ ಮಾಡಲು ಸಾದ್ಯವಾಗದ ಗೋವುಗಳನ್ನು ಸರ್ಕಾರ ಖರೀದಿ ಮಾಡುತ್ತಿದೆಯೇ: ಮಾಡುವುದಾದರೆ ಅವುಗಳ ಪಾಲನೆಗೆ ಯಾವ ರೀತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. | ವಯಸ್ಸಾದ ಮತ್ತು ಹೊಲದಲ್ಲಿ ಉಳುಮೆ ಮಾಡಲು ಸಾದ್ಯವಾಗದ ಗೋವುಗಳನ್ನು ಸರ್ಕಾರವು ಖರೀದಿಸುವುದಿಲ್ಲ. ಅವುಗಳನ್ನು ಹತ್ತಿರದ ಗೋಶಾಲೆಗಳಿಗೆ ಬಿಡಬಹುದಾಗಿರುತ್ತದೆ.<br>ಗೋಶಾಲೆಗಳಲ್ಲಿ ಇರುವ ಪಶುಗಳಿಗೆ ಸರ್ಕಾರದಿಂದ ಸಹಾಯಾನುದಾನ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. |
| ಇ | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಗೋ ಶಾಲೆಗಳು ನಡೆಯುತ್ತಿವೆ: ಸರ್ಕಾರಿ ಹಾಗೂ ಖಾಸಗಿ ವತಿಯಿಂದ ಎಷ್ಟು ಗೋ ಶಾಲೆಗಳು ನಿರ್ವಹಣೆಯಾಗುತ್ತಿವೆ? (ತಾಲ್ಲೂಕುವಾರು ಮಾಹಿತಿ ನೀಡುವುದು) | ಮೈಸೂರು ಜಿಲ್ಲೆಯಲ್ಲಿ 3 ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ 1 ಗೋಶಾಲೆ ನಡೆಯುತ್ತಿವೆ, ಈ ಎಲ್ಲಾ ಗೋಶಾಲೆಗಳು ಖಾಸಗಿ ಗೋಶಾಲೆಗಳಾಗಿರುತ್ತವೆ ಇವುಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ. ಸರ್ಕಾರ ವತಿಯಿಂದ ಯಾವುದೇ ಗೋಶಾಲೆ ನಡೆಸುತ್ತಿಲ್ಲ.<br>**ಮೈಸೂರು ಜಿಲ್ಲೆ**<br>ಮೈಸೂರು — ಮೈಸೂರು ಪಿಂಜರಾಪೋಲ್ ಸೊಸೈಟಿ ಲಿ.(ರಿ), ಚಾಮುಂಡಿಬೆಟ್ಟದ ಪಾದ, ಮೈಸೂರು<br>ನಂಜನಗೂಡು — ಶ್ರೀ ಶಿವರಾತ್ರೀಶ್ವರ ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ, ಜೆ.ಎಸ್.ಎಸ್ ಮಹಾವಿದ್ಯಾಪೀಠ, ಸುತ್ತೂರು, ನಂಜನಗೂಡು ತಾ: |

| | | | | |
|---|---|---|---|---|
| | | ತಿ.ನರಸೀಪುರ | ಕರ್ನಾಟಕ ಪ್ರಾಣಿದಯಾ ಪಿಂಜರಾಪೋಲ್ ಟ್ರಸ್ಟ್ (ರಿ), ಲಿಂಕ್ ರಸ್ತೆ, ಕುರುಬೂರು, ತಿ.ನರಸೀಪುರ ತಾ: | |
| | | **ಚಾಮರಾಜನಗರ ಜಿಲ್ಲೆ** | | |
| | | ಹನೂರು ತಾಲ್ಲೂಕು, | ಶ್ರೀ ಮಲೈಮಹದೇಶ್ವರ ಸ್ವಾಮಿ ಕೃಪಾ ಎಜುಕೇಷನ್ ಸೊಸೈಟಿ(ಲಿ), ಮಲೈ ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ | |

**ಪಸಂಮೀ ಇ-72 ಸಲೆವಿ 2021**

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು